Reg. No. | | | | | | | | |

**BASKAL 253/BSWKAL 253**

**ಗುಣಾಂಕ ಆಧಾರಿತ 4ನೇ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ. ಪರೀಕ್ಷೆ, ಎಪ್ರಿಲ್/ಮೇ 2017**

**(2014-15 ಬ್ಯಾಚು ಮತ್ತು ಮುಂದಿನವರಿಗಾಗಿ)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ – IV**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

**ಭಾಗ – 1**

**(ಕಾವ್ಯ)**

I. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಶ್ರೀ ರಾಮನ ಮಾತನ್ನು ಮೀರಲಾರದ ಲಕ್ಷ್ಮಣನ ಸಂಕಟ ಹಾಗೂ ರಾಮನು ತನ್ನನ್ನು ತ್ಯಜಿಸುತ್ತಿದ್ದಾನೆಂದು ತಿಳಿದ ಬಳಿಕ ಸೀತೆಯ ದುಃಖವು ಲಕ್ಷ್ಮೀಶನ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ?

2) ಶಿವನ ಹಣೆಗಣ್ಣಿನ ಬೆಂಕಿಯಿಂದ ಮನ್ಮಥನು ದಹಿಸಿದ ಪ್ರಸಂಗವನ್ನು ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×6=6)**

1) ಉತ್ತಮರ ಸಂಗವನ್ನು ಕರುಣಿಸುವಂತೆ ಭಗವಂತನಲ್ಲಿ ಶ್ರೀಪಾದರಾಯರು ಹೇಗೆ ಮೊರೆ ಇಟ್ಟಿದ್ದಾರೆ ?

2) ಹೊಸ ಬದುಕನ್ನು ಕಟ್ಟಿಕೊಳ್ಳುವ ಹೆಣ್ಣೊಬ್ಬಳ ತುಡಿತ 'ಅವಳುಂಟು ಅವಳ ರೆಕ್ಕೆಯುಂಟು' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ ?

ಇ) **ಒಂದನ್ನು** ಕುರಿತು ಟಿಪ್ಪಣಿ ಬರೆಯಿರಿ : **(1×4=4)**

1) ಪುರಂದರದಾಸರು.

2) ದಿನಕರ ದೇಸಾಯಿ.

II. ಅ) **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಭಾವ ಸ್ವಾರಸ್ಯವನ್ನು ವಿವರಿಸಿರಿ : **(1×5=5)**

1) ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ
ಗೀಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು||
ಲೋಕದರಸೇಗೈದೊಡಂ ತನ್ನ ಕಿಂಕರರ್
ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ
ರೀಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ||

P.T.O.

2) ಮಾಗದ ಕಾಲ ಗಾಯದ ನೋವಿನಲ್ಲಿ
ಹಿಡಿದಿಡುವ ಹೆಜ್ಜೆ ತಡೆತಡೆಯುವ ಮಾತಿನಲ್ಲಿ
ಜೀವನೋತ್ಸಾಹಕ್ಕೆ ಎಳ್ಳಷ್ಟು ಕಂದಿಲ್ಲದೆ
ಜವರಾಯನ ಹಾಸ್ಯ ಮಾಡುತ್ತ
ಏನೆಂದೂ ತಕರಾರಿಲ್ಲದೆ ಮಿನುಗುತ್ತಿದ್ದಾಳೆ
ನನ್ನಂತರಂಗ ತೆರೆದಿದ್ದಾಳೆ.

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿರಿ : **(2×4=8)**

1) ತಲೆಬಲ್ಲಿತೆಂದು ಕಲ್ಲನೆ ಹಾಯಬೇಡ.
2) ಧನ್ಯವಾಯಿತು ಹುಟ್ಟು ಸಾವಿನಲ್ಲಿ.
3) ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು ಎಚ್ಚರಿಕೆ.

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(4×1=4)**

1) 'ಕರ್ನಾಟಕ ಕವಿಚೂತವನಚೈತ್ರ' ಯಾರು ?
2) 'ಕರ್ನಾಟಕ ಸಂಗೀತ ಪಿತಾಮಹ' ಯಾರು ?
3) ಕನಕದಾಸರ ಹುಟ್ಟೂರು ಯಾವುದು ?
4) 'ನಾವು ಹುಡುಗಿಯರೇ ಹೀಗೆ' – ಯಾರ ಕವನ ಸಂಕಲನ ?

## ಭಾಗ – 2

### (ಮಹಾಕಾವ್ಯ)

III. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ದಶರಥನು ರಾಮನಿಗೆ ಪಟ್ಟಕಟ್ಟಲು ನಿರ್ಧರಿಸಿದ ಸನ್ನಿವೇಶವನ್ನು ವಿವರಿಸಿರಿ.
2) ವಿಧಿಶಕ್ತಿಯ ಪ್ರಾಬಲ್ಯವು ಮಮತೆಯ ಸುಳಿ ಮಂಥರೆ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಮಂಥರೆಯು ಕೈಕೆಗೆ ಬೋಧನೆ ನೀಡಿದ ಸನ್ನಿವೇಶವನ್ನು ವಿವರಿಸಿರಿ.
2) ಕವಿಯು ದಶರಥನ ಪಾತ್ರವನ್ನು ಚಿತ್ರಿಸಿದ ಬಗೆಯನ್ನು ವಿವರಿಸಿರಿ.

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) ಕುವೆಂಪುರವರ ಒಂದು ಕಾದಂಬರಿಯನ್ನು ಹೆಸರಿಸಿ.
2) 'ನೆನಪಿನ ದೋಣಿಯಲ್ಲಿ' ಯಾರ ಆತ್ಮಚರಿತ್ರೆ ?

## ಭಾಗ – 3

## (ಗದ್ಯ)

IV. ಅ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8=8)**

1) ಜಪಾನಿನಲ್ಲಿ ಫುಕುವೋಕಾ ಮಾಡಿದ ರೈತಕ್ರಾಂತಿ ಯಾವುದು ? ಅದರ ವಿಶೇಷತೆಯೇನು ?
2) ಲಕ್ಕು ಎಂಬ ಗೂಳಿ ಬಲಶಾಲಿ ಹುಲಿಯನ್ನು ಬೇಟೆಯಾಡಿದ ಪ್ರಸಂಗವನ್ನು ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಸರ್ವ ಸಮಾನ ಭಾರತದ ಬಗ್ಗೆ ದೇವನೂರು ಅವರ ಚಿಂತನೆಗಳೇನು ? ವಿವರಿಸಿರಿ.
2) ವಸ್ತುಗಳನ್ನು ಬಿಸಾಡದೆ ಸಂಗ್ರಹಿಸಿರುವುದರಿಂದ ಮನೆಯಲ್ಲಾಗುವ ಅನಾನುಕೂಲತೆಯೇನು ?

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) 'ಪ್ರಾಧ್ಯಾಪಕನ ಪೀಠದಲ್ಲಿ' ಯಾರ ಕೃತಿ ?
2) 'ಕಾಕೆಮಾನಿ' ಯಾರ ಕಾವ್ಯನಾಮ ?

## ಭಾಗ – 4

## (ಕ್ರಿಯಾತ್ಮಕ ಕನ್ನಡ)

V. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಚಲನಚಿತ್ರವೊಂದಕ್ಕೆ 'ಚಿತ್ರಕಥೆ' ಎಷ್ಟು ಮುಖ್ಯ ? ಸತ್ಯಮೂರ್ತಿ ಆನಂದೂರರ ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿರಿ.
2) ಅಭ್ಯರ್ಥನ ಪತ್ರ ಎಂದರೇನು ? ಎಷ್ಟು ವಿಧ ? ವಿವರಿಸಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಹಾಜರಾತಿ ವರದಿ ಎಂದರೇನು ? ಉದಾಹರಣೆ ನೀಡಿ.
2) ಅಭ್ಯರ್ಥನ ಪತ್ರದ ಮಾದರಿಯನ್ನು ನೀಡಿರಿ.

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) 'ಸಾಕ್ಷ್ಯಚಿತ್ರ'ವನ್ನು ಇಂಗ್ಲೀಷ್‌ನಲ್ಲಿ ಏನೆಂದು ಕರೆಯುತ್ತಾರೆ ?
2) 'ಪಥೇರ್ ಪಾಂಚಾಲಿ' ಯಾರು ನಿರ್ದೇಶಿಸಿದ ಸಿನೆಮಾ ?

---